ಶ್ರೀ ಎಂ. ಶಿವಣ್ಣ :- ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ರೀತಿಯಲ್ಲಿ ರಾಜ್ಯದಲ್ಲಿ ಇದೊಂದು ಅತ್ಯಂತ ರಮಣೀಯವಾದ ಪ್ರದೇಶ ಮತ್ತು ಅಲ್ಲಿ ಮೆಡಿಸಿಲ್‌ನ್ ಫಾಂಟ್ಸ್‌ಗೆ ಮತ್ತು ಉತ್ತಮವಾದ ಹೂವುಗಳನ್ನು ಬೆಳೆಯತಕ್ಕಂಥದ್ದರಲ್ಲಿ ಸಮಶೀತೋಷ್ಣ ವಲಯದಲ್ಲಿ ಭಾರಿ ಒಳ್ಳೆಯ ಪ್ರದೇಶ. ಇದನ್ನು ಹಿಂದೆ ಮೈಸೂರು ಮಹಾರಾಜರು 1932ರಲ್ಲಿ ಅಲ್ಲಿ ಒಂದು ವಿಶ್ರಾಂತಿಧಾಮ ಮಾಡುವ ಸಲುವಾಗಿ ಇದನ್ನು ಸ್ಥಾಪನೆ ಮಾಡಿಕೊಂಡು ನಂತರ ಅದನ್ನು ತೋಟಗಾರಿಕೆ ಇಲಾಖೆಗೆ ವಹಿಸಿಕೊಟ್ಟಿದ್ದರು. 60 ವರ್ಷಗಳ ಕಾಲ ತೋಟಗಾರಿಕೆ ಇಲಾಖೆಯೇ ಅದನ್ನು ನಿರ್ವಹಿಸಿಕೊಂಡು ಬಂದಿದೆ. ಅಲ್ಲಿ ಸುಮಾರು 4700 ಅಡಿ ಎತ್ತರದಲ್ಲಿ ಬಹುಶಃ ಬೇರೆ ಎಲ್ಲೂ ಇಲ್ಲ, ಸುಮಾರು 3000 ಸಾವಿರಕ್ಕೂ ಹೆಚ್ಚು ಹೂವಿನಗಿಡಗಳು, ಮೆಡಿಸಿನಲ್ ಫ್ಲಾಂಟ್ಸ್‌ಗಂತೂ ಅದು ತುಂಬಾ ಹೇಳಿ ಮಾಡಿಸಿದಂಥ ಪ್ರದೇಶ. ಅದನ್ನು ತೋಟಗಾರಿಕೆ ಇಲಾಖೆ ಎಲ್ಲಾ ರೀತಿಯಿಂದಲೂ ಅಭಿವೃದ್ಧಿಪಡಿಸಿಕೊಂಡು ಬಂದಿದೆ. ಅದು ಮಕ್ಕಳ ಪಾರ್ಕ್ ಆಗಬಹುದು, ಮತ್ತೊಂದು ಆಗಬಹುದು ಆದರೆ ಇತ್ತೀಚೆಗೆ ರಾಜ್ಯದಲ್ಲಿ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ರಾಜ್ಯದಲ್ಲಿರುವ ಎಲ್ಲಾ ಸ್ಥಳಗಳನ್ನು ಅಭಿವೃದ್ಧಿಪಡಿಸಬೇಕು ಎನ್ನುವ ನಿಟ್ಟಿನಲ್ಲಿ ಕೆಮ್ಮಣ್ಣುಗುಂಡಿಯನ್ನು ತೆಗೆದುಕೊಳ್ಳಬೇಕು ಎನ್ನುವ ಉದ್ದೇಶ ಸರ್ಕಾರಕ್ಕಿದೆ. ಇದಕ್ಕೆ ಸಚಿವರ ಸಂಪುಟದ ಒಪ್ಪಿಗೆ ಕೂಡ ಆಗಿದೆ. ಒಂದು ಅಂಶ ಏನೆಂದರೆ, ತೋಟಗಾರಿಕೆ ಇಲಾಖೆಯಿಂದ 200 ಎಕರೆ ಪ್ರದೇಶದಲ್ಲಿ 100 ಎಕರೆ ಪ್ರದೇಶವನ್ನು ನಿರ್ವಹಣೆ ಮಾಡುತ್ತಿದ್ದೇವೆ. ಇದನ್ನೂ ಕೂಡ ಅಭಿವೃದ್ಧಿಪಡಿಸಿಕೊಂಡು ಹೋಗಬೇಕಾಗುತ್ತದೆ. ರಾಜ್ಯ ಪ್ರವಾಸೋದ್ಯಮ ಇಲಾಖೆಗೆ ಪೂರಕವಾಗಿ ಇದನ್ನು ಮಾಡಿಕೊಂಡು ಹೋಗತಕ್ಕಂಥದ್ದು ತೋಟಗಾರಿಕೆ ಇಲಾಖೆಯ ವತಿಯಿಂದ ಆಗುತ್ತದೆ. ಆದ್ದರಿಂದ ಯಾವುದೇ ರೀತಿಯ ಆತಂಕ ಪಡುವುದು ಬೇಡ, ಇದನ್ನು ಪ್ರವಾಸೋದ್ಯಮ ಇಲಾಖೆ ಪಡೆದುಕೊಂಡರೂ ಕೂಡ ತೋಟಗಾರಿಕೆ ಇಲಾಖೆಯಿಂದ ಏನು ನಿರ್ವಹಣೆ ಮಾಡುತ್ತಾರೋ ಇದರಲ್ಲೂ ಕೂಡ ಆ ಕೆಲಸ ಚಾಚೂ ತಪ್ಪದೇ ಆಗುತ್ತದೆ ಎಂದು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು :- ಮುಂದಿನ ಪ್ರಶ್ನೆ ಹೆಚ್.ಎಂ. ಚಂದ್ರಶೇಖರಪ್ಪನವರದ್ದು, ಮಾನ್ಯ ಸಚಿವರು ತಮ್ಮ ಪ್ರಶ್ನೆಗಳನ್ನು ಸೋಮವಾರ ತೆಗೆದುಕೊಳ್ಳೋಣ ಎಂದು ಪತ್ರ ಬರೆದಿದ್ದಾರೆ, ಹೀಗಾಗಿ ಸೋಮವಾರ ತಮ್ಮ ಪ್ರಶ್ನೆ ತೆಗೆದುಕೊಳ್ಳೋಣ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ :- ಸೋಮವಾರ ಪುನಃ ಮುಂದಕ್ಕೆ ಹಾಕಬೇಡಿ, ಅವತ್ತು ನನ್ನ ಪ್ರಶ್ನೆ ತೆಗೆದುಕೊಳ್ಳಿ.

ಅಧ್ಯಕ್ಷರು :- ಆಯಿತು, ಮುಂದಿನ ಪ್ರಶ್ನೆ ನಾಯ್ಡುರವರು ಇಲ್ಲ, ಮಾನ್ಯ ಸಿಂಧ್ಯಾರವರ ಪ್ರಶ್ನೆಗೂ ಕೂಡ ಸಚಿವರು ಪತ್ರ ಬರೆದಿರುವುದರಿಂದ ಸೋಮವಾರ ತೆಗೆದುಕೊಳ್ಳೋಣ, ಮುಂದಿನ ಪ್ರಶ್ನೆ ಅಂಗಾರ ಅವರು ಇಲ್ಲ, ಪಿ.ಹೆಚ್.ಪೂಜಾರಿ ಅವರು ಇಲ್ಲ, ಎ.ಎಸ್. ಗುರುಸ್ವಾಮಿ, ತನ್ವೀರ್‌ಶೇಠ್, ಸದಸ್ಯರೇ ಇಲ್ಲ, ಅಮೇಲೆ ಗೋಪಾಲ ಭಂಡಾರಿ ಅವರು ಇಲ್ಲ, ಆಯಿತು, ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು. ನಂತರ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಅ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :- ಮಾನ್ಯ ಅಧ್ಯಕ್ಷರೆ, ದಿನಾಂಕ: 27.12.2002ರಂದು ಲಿಖಿತ ಮೂಲಕ ಉತ್ತರಿಸಲಿರುವ 63 ಪ್ರಶ್ನೆಗಳ ಪೈಕಿ 39 ಪ್ರಶ್ನೆಗಳಿಗೆ ಉತ್ತರ ಸಂಬಂಧ ಪಟ್ಟಿಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು :- ಮಂಡಿಸಲಾಯಿತು.

ಅನುಬಂಧ - 1

ಇ) ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಉತ್ತರಗಳು

ಅಧ್ಯಕ್ಷರು :- ದಿನಾಂಕ: 26.12.2002ರಂದು ಸದನದಲ್ಲಿ ಉತ್ತರಿಸುವ 14 ಪ್ರಶ್ನೆಗಳ ಪೈಕಿ 12 ಪ್ರಶ್ನೆಗಳಿಗೆ ಸಂಬಂಧಪಟ್ಟ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 50 ಪ್ರಶ್ನೆಗಳ ಪೈಕಿ 46 ಪ್ರಶ್ನೆಗಳಿಗೆ ಸಂಬಂಧಪಟ್ಟ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. ನಂತರ ಕಾರ್ಯದರ್ಶಿಯವರು, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ವಿಧೇಯಕಗಳನ್ನು ಸಭೆಯ ಮುಂದಿಡುವುದು.

ಮಂಡಿಸಲಾಯಿತು.

ಅನುಬಂಧ II

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಅ) ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ವಿಧೇಯಕಗಳು:

ಶ್ರೀ ಟಿ. ರಾಜಣ್ಣ (ಕಾರ್ಯದರ್ಶಿ) :- ಮಾನ್ಯ ಅಧ್ಯಕ್ಷರೆ, ವಿಧಾನ ಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿ ಕೆಳಕಂಡ ವಿಧೇಯಗಳನ್ನು ಸಭೆಯ ಮುಂದಿಡುತ್ತೇನೆ.

1. ಕರ್ನಾಟಕ ಫ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ತಿದ್ದುಪಡಿ) ವಿಧೇಯಕ, 2002.
2. ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ ವಿಧೇಯಕ, 2002.
3. ಕುರಿ ಮತ್ತು ಕುರಿ ಉತ್ಪನ್ನಗಳ ಅಭಿವೃದ್ಧಿ (ನಿರಸನ) ವಿಧೇಯಕ, 2002.

ಮಂಡಿಸಲಾಯಿತು ಅನುಬಂಧ 3,4,5

ಆ) ಸಭೆಯ ಮುಂದಿಡಲಾದ ಪತ್ರಗಳು

I ಶ್ರೀ ಮಲ್ಲಿಕಾರ್ಜುನಖರ್ಗೆ (ಗೃಹಸಚಿವರು) (ಮುಖ್ಯಮಂತ್ರಿಗಳ ಪರವಾಗಿ): ಮಾನ್ಯ ಅಧ್ಯಕ್ಷರೆ,

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ 8(3)ರ ಪ್ರಕರಣದ ಮೇರೆಗೆ:

1. ಕರ್ನಾಟಕ ರಾಜ್ಯ ವಿಮಾ ಯೋಜನೆ (ವೈದ್ಯಕೀಯ) (ವಿಶೇಷ ನೇಮಕಾತಿ) ನಿಯಮಗಳು 2001ರಲ್ಲಿ ನಿಯಮ 2 ಮತ್ತು 3ಕ್ಕೆ ತಿದ್ದುಪಡಿ ಮಾಡಿ ದಿನಾಂಕ 12.6.2002ರಂದು ಹೊರಡಿಸಲಾದ ಡಿಪಿಎಆರ್:97:ಎಸ್ಆರ್ಡಿ:2001ನೇ ಸಂಖ್ಯೆಯ ಅಧಿಸೂಚನೆ,
2. ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸೇವೆಗಳು ಮತ್ತು ಕರ್ನಾಟಕ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಸೇವೆಗಳು (ಕೆಲವು ವೃಂದಗಳಿಗೆ ನೇಮಕಾತಿ) (ವಿಶೇಷ ನೇಮಕಾತಿ) ನಿಯಮಗಳು 2002ನ್ನು ರಚಿಸಿರುವ ಸಂಬಂಧದಲ್ಲಿ ದಿನಾಂಕ: 29.5.2002ರಂದು ಹೊರಡಿಸಲಾದ ಡಿಪಿಎಆರ್:89:ಎಸ್ಆರ್ಡಿ:2001ನೇ ಸಂಖ್ಯೆಯ ಅಧಿಸೂಚನೆ,
3. ಕರ್ನಾಟಕ ರಾಜ್ಯ ನಾಗರೀಕ ಸೇವೆಗಳು (ಅರೆಕಾಲಿಕ ಉಪನ್ಯಾಸಕರಾಗಿ ಕೆಲಸ ಮಾಡುತ್ತಿರುವ ವ್ಯಕ್ತಿಗಳನ್ನು ಕರ್ನಾಟಕ ಶಿಕ್ಷಣ ಇಲಾಖೆ ಸೇವೆಯಲ್ಲಿ ವಿಲೀನಗೊಳಿಸುವುದು) (ಕಾಲೇಜು ಶಿಕ್ಷಣ ಇಲಾಖೆ) (ವಿಶೇಷ) ನಿಯಮಗಳು, 1996ರ